



ಭಗವಂತನ ನಾಮೋಚ್ಚಾರಣೆ ಮಾಡಿದ್ದೇ ಆದರೆ ದೇಹಕ್ಕೆ ಸಂಬಂಧಪಟ್ಟ ಪಾಪಗಳೆಲ್ಲ ಕಾಲಿಗೆ ಬುದ್ಧಿ ಹೇಳುತ್ತವೆ. ದೇಹವೆಂಬ ವೃಕ್ಷದಲ್ಲಿ ಪಾಪವೆಂಬ ಹಕ್ಕಿಗಳು ಕುಳಿತುಕೊಳ್ಳುತ್ತವೆ. ಭಗವಂತನ ನಾಮಗುಣ ಕೀರ್ತನೆ ಮಾಡುವುದೇ ಕೈ ಚಪ್ಪಾಳೆ ಹೊಡೆದ ಹಾಗೆ. ಕೈ ಚಪ್ಪಾಳೆ ಹಾಕಿದೊಡನೆಯೇ ಮರದಿಂದ ಎಲ್ಲ ಹಕ್ಕಿಗಳು ಓಡಿಹೋಗುವ ಹಾಗೆ, ಭಗವಂತನ ನಾಮಗುಣಕೀರ್ತನೆ ಮಾಡಿದೊಡನೆಯೇ ಎಲ್ಲ ಪಾಪಗಳೂ ಕಂಬಿಕೀಳುತ್ತವೆ.

ಮತ್ತೆ ನೋಡು, ಹುಲ್ಲುಗಾವಲಿನಲ್ಲಿ ತೆಗೆದಿರುವ ಕುಂಟೆಯ ನೀರು ಸೂರ್ಯನ ತಾಪದಿಂದ ತನ್ನಷ್ಟಕ್ಕೆ ತಾನೇ ಇಂಗಿಹೋಗಿಬಿಡುತ್ತದೆ. ಅದೇ ರೀತಿಯಾಗಿ ಪಾಪಕೂಪದ ನೀರು ಭಗವಂತನ ನಾಮೋಚ್ಚಾರಣೆಯಿಂದ ತನ್ನಷ್ಟಕ್ಕೆ ತಾನೇ ಇಂಗಿಹೋಗಿಬಿಡುತ್ತದೆ.

ನಿತಾಯ್ ಹೇಗಾದರೂ ಮಾಡಿ ಜನರು ಭಗವನ್ನಾಮೋಚ್ಚಾರಣೆ ಮಾಡುವಂತೆ ಮಾಡುತ್ತಿದ್ದ. ಚೈತನ್ಯದೇವ ಹೇಳುತ್ತಿದ್ದ: "ಭಗವನ್ನಾಮಕ್ಕೆ ಬಹಳ ಮಾಹಾತ್ಮ್ಯ. ಒಡನೆಯೇ ಫಲ ದೊರಕದೇ ಹೋಗಬಹುದು. ಆದರೆ ಒಂದಲ್ಲ ಒಂದು ದಿನ ಫಲ ದೊರೆತೇ ದೊರೆಯುತ್ತದೆ. ಇದು ಮನೆಯ ಕಾರ್ನಿಸಿನ ಮೇಲೆ ಬಿದ್ದಿರುವ ಬೀಜದ ಹಾಗೆ. ಬಹಳ ಕಾಲವಾದ ಮೇಲೆ ಕಟ್ಟಡ ನೆಲಸಮವಾಗುತ್ತದೆ. ಬೀಜ ನೆಲಕ್ಕೆ ಬೀಳುತ್ತದೆ. ಕೊನೆಗೆ ಅದು ಮೊಳೆತು ಫಲ ಕೊಡುತ್ತದೆ."

ಭಗವಂತನ ನಾಮಗುಣಕೀರ್ತನೆ ಮಾಡುವ ಅಭ್ಯಾಸ ಇಟ್ಟುಕೊಂಡಿದ್ದರೆ ಕ್ರಮೇಣ ಭಕ್ತಿ ಉಂಟಾಗಿಬಿಡುತ್ತದೆ. ಭಗವಂತನ ಹೆಸರು ಹೇಳಲು ಲಜ್ಜೆ ಪಟ್ಟುಕೊಳ್ಳಬಾರದು. "ಲಜ್ಜೆ, ದ್ವೇಷ ಭಯ ಇವು ಮೂರೂ ಇರಬಾರದು."

ನಾಮದಲ್ಲಿ ಒಳ್ಳೇ ಮಾಹಾತ್ಮ್ಯ ಇರುವುದೇನೋ ನಿಜ. ಆದರೆ ಅನುರಾಗವಿಲ್ಲದಿದ್ದರೆ ಏನು ದೊರೆಯುತ್ತದೆ? ಭಗವಂತನಿಗಾಗಿ ಪ್ರಾಣ ಸುಮ್ಮನೆ ವ್ಯಾಕುಲ ಪಡಬೇಕು. ನಾಮವನ್ನೇನೋ ಸುಮ್ಮನೆ ಉಚ್ಚರಿಸುತ್ತ ಕಾಮಕಾಂಚನಗಳಲ್ಲಿ ಮನಸ್ಸಿಟ್ಟಿದ್ದರೆ ಭಗವಂತನ ಸಾಕ್ಷಾತ್ಕಾರ ದೊರೆಯುವುದೆ? ಚೇಳು ಅಥವಾ ಜೇಡರ ಹುಳುಗಳ ಕಡಿತದ ನೋವು ಕೇವಲ ಮಂತ್ರದಿಂದ ಇಳಿದುಹೋಗುವುದಿಲ್ಲ. ಬೆರಣಿಯ ಹೊಗೆ ಬಿಡಬೇಕು.

ಬಹುಶಃ ಅಜಾಮಿಳ ಹಿಂದಿನ ಜನ್ಮಗಳಲ್ಲಿ ಬಹಳವಾಗಿ ತಪಸ್ಸು ಮಾಡಿರಬೇಕು. ಕೊನೆ ಜನ್ಮದಲ್ಲೂ ಆತ ಒಮ್ಮೆ ತಪಸ್ಸು ಮಾಡಿದ ಎಂಬುದಾಗಿ ಒಂದು ಕಡೆ ಹೇಳಿದೆ. ಅದೂ ಅಲ್ಲದೆ ಅದು ಆತನ ಅವಸಾನಕಾಲ. ಆನೆಗೆ ಮೈತೊಳೆದು ಸ್ನಾನ ಮಾಡಿಸುವುದರಿಂದ ಆಗುವ ಪ್ರಯೋಜನವೇನು? ಅದು ಮತ್ತೆ ಧೂಳು, ಬಗ್ಗಡ, ಬದಿ ಹೊಯ್ದುಕೊಂಡು ಎಂದಿನಂತೆಯೇ ಆಗಿಬಿಡುತ್ತದೆ. ಆದರೆ ಅದು ಗಜಶಾಲೆಯನ್ನು ಪ್ರವೇಶಿಸುವ ಮುನ್ನ ಚೆನ್ನಾಗಿ ಮೈತೊಳೆದು ಸ್ನಾನ ಮಾಡಿಸಿಬಿಟ್ಟರೆ ಸ್ವಚ್ಛವಾಗಿಯೇ ಇರುತ್ತದೆ.

ಭಗವನ್ನಾಮೋಚ್ಚಾರಣೆಯಿಂದ ಮನುಷ್ಯ ಒಮ್ಮೆ ಶುದ್ಧನೇನೋ ಆದ ಅಂತ ಇಟ್ಟುಕೊ. ಆದರೆ ಮತ್ತೆ ಆತ ಅನೇಕ ಪಾಪಕಾರ್ಯಗಳಲ್ಲಿ ತೊಡಗಿಬಿಡುತ್ತಾನೆ. ಆತನದು ದುರ್ಬಲ ಮನಸ್ಸು. ಮತ್ತೆ ಪಾಪಕಾರ್ಯಗಳನ್ನು ಮಾಡುವುದಿಲ್ಲವೆಂದು ಪ್ರತಿಜ್ಞೆ ಮಾಡಲಾರ. ಗಂಗಾಸ್ನಾನದಿಂದ ಎಲ್ಲ ಪಾಪಗಳೂ ಹೋಗುವುದೇನೋ ನಿಜ; ಆದರೆ ಹೋದರೇನು? ಜನ ಹೇಳುತ್ತಾರೆ: ಪಾಪಗಳೆಲ್ಲ ಗಂಗಾದಡದಲ್ಲಿರುವ ಮರಗಳ ಮೇಲೆ ಕುಳಿತಿರುತ್ತವೆ; ಗಂಗಾಸ್ನಾನ ಮಾಡಿ ಮನುಷ್ಯ ಹಿಂದಿರುಗಿ ದಡ ಹತ್ತಿದ ಎಂದೊಡನೆಯೇ, ಆತನ ಹಿಂದಿನ ಪಾಪಗಳು ಮರಗಳಿಂದ ಹಾರಿ ಮತ್ತೆ ಆತನ ಹೆಗಲು ಹತ್ತಿಬಿಡುತ್ತವೆ. (ಭಕ್ತರೆಲ್ಲ ನಗುತ್ತಿದ್ದಾರೆ.) ಸ್ನಾನ ಮಾಡಿ ಒಂದೆರಡು ಹೆಜ್ಜೆ ಇಡುವುದರಲ್ಲಿಯೇ ಅವು ಆತನ ಹೆಗಲು ಹತ್ತಿಬಿಡುತ್ತವೆ.

ಅದಕ್ಕಾಗಿಯೇ ನಾನು ಹೇಳುವುದು, ಭಗವನ್ನಾಮೋಚ್ಚಾರಣೆ ಮಾಡಿ; ಜೊತೆಗೆ ಆತನಲ್ಲಿ ನಿಮಗೆ ಅನುರಾಗ ಉಂಟಾಗುವಂತೆ ಕರುಣಿಸಬೇಕೆಂದೂ ಆತನಿಗೆ ಪ್ರಾರ್ಥನೆ ಮಾಡಿ. ಭಗವಂತನನ್ನು ಪ್ರಾರ್ಥಿಸಿಕೊಳ್ಳಿ: "ಈ ಎರಡು ದಿನದ ಬಾಳಿನ, ಹಣ, ಕೀರ್ತಿ, ದೇಹಸುಖ ಇವುಗಳ ಮೇಲಿನ ಆಸಕ್ತಿ ದಿನದಿನಕ್ಕೂ ಕಡಮೆಯಾಗುತ್ತಾ ಬರುವಂತೆ ಕರುಣಿಸು" ಎಂದು. ಆತನ ನಾಮದಲ್ಲಿ ಅಭಿರುಚಿ ಉಂಟಾಗುವಂತೆ ವ್ಯಾಕುಲನಾಗಿ ಆತನಿಗೆ ಪ್ರಾರ್ಥನೆ ಮಾಡು. ಆತ ಸಕಲಾಭೀಷ್ಟದಾಯಕ. ನಿಶ್ಚಯವಾಗಿಯೂ ಪೂರ್ಣ ಮಾಡಿಕೊಡುತ್ತಾನೆ.